





ಸಾಮಾನ್ಯವಾಗಿ ಹೆಪಟೈಟಿಸ್ ಬಿ ಮದ್ಯಪಾನಿಗಳನ್ನು ಕಾಡುವುದು ಹೆಚ್ಚು. ಹೆಪಟೈಟಿಸ್ ವೈರಸ್‌ನಲ್ಲಿ ಎ, ಬಿ, ಸಿ, ಇ ಮತ್ತು ಡೆಲ್ಟಾ ಫ್ಯಾಕ್ಟರ್ ಎಂಬ ವೈರಸ್ ಪ್ರಭೇದಗಳಿದ್ದು, ಪ್ರತಿಯೊಂದು ವೈರಸ್‌ನಿಂದಲೂ ವಿಭಿನ್ನ ರೋಗ ಲಕ್ಷಣಗಳುಳ್ಳ ಕಾಯಿಲೆ ಬರಬಹುದು. ಇವುಗಳಲ್ಲಿ ಹೆಪಟೈಟಿಸ್ ಬಿ ಸೋಂಕು ರಕ್ತದ ಮೂಲಕ ಹರಡುತ್ತದೆ.

ಇದಲ್ಲದೆ ಸೋಂಕು ಪೀಡಿತ ವ್ಯಕ್ತಿಯೊಂದಿಗೆ ಅಸುರಕ್ಷಿತ ಲೈಂಗಿಕತೆ ಇದ್ದಾಗ, ರಕ್ತಪೂರಣ ಪ್ರಕ್ರಿಯೆಯಲ್ಲಿ ಅಡೆತಡೆ, ಮಾದಕ ವ್ಯಸನಗಳಿದ್ದವರಲ್ಲಿ ಇದು ಹರಡುವ ಸಾಧ್ಯತೆ ಇದೆ.

ಹೆಪಟೈಟಿಸ್ ಸಾಮಾನ್ಯವಾಗಿ ಹೆಪಟೋಟ್ರೋಪಿಕ್ (ಯಕೃತ್ತಿನ ನಿರ್ದಿಷ್ಟ) ವೈರಸ್‌ಗಳಾದ ಹೆಪಟೈಟಿಸ್ ಎ (ಎಚ್‌ಎವಿ), ಹೆಪಟೈಟಿಸ್ ಬಿ (ಎಚ್‌ಬಿವಿ), ಹೆಪಟೈಟಿಸ್ ಸಿ (ಎಚ್‌ಸಿವಿ), ಹೆಪಟೈಟಿಸ್ ಡಿ ಮತ್ತು ಹೆಪಟೈಟಿಸ್ ಇ (ಎಚ್‌ಇ) ಇಂದ ಉಂಟಾಗುತ್ತದೆ. ಇದು ಬಹಳ ಅಪಾಯಕಾರಿ ಕಾಯಿಲೆ ಎಂದು ಪರಿಗಣಿತವಾಗಿದೆ.

'ಹೆಪಟೈಟಿಸ್ ಬಿ ಪ್ರಾಣಾಂತಿಕ ಕಾಯಿಲೆ, ಕೆಲವೊಮ್ಮೆ ಈ ವೈರಸ್ ಮಗು ಹುಟ್ಟುವ ಸಂದರ್ಭದಲ್ಲಿ ತಾಯಿಯಿಂದ ಮಗುವಿಗೆ ರಕ್ತದ ಮೂಲಕ ಹರಡುವ ಅಪಾಯವಿದೆ. ಜೊತೆಗೆ ಸೂಕ್ತ ಪರೀಕ್ಷೆ ಮಾಡದೇ ಇತರರಿಂದ ರಕ್ತ ಪಡೆದುಕೊಳ್ಳುವುದರಿಂದ ಸಹ ಬರಬಹುದು. ಟ್ಯಾಟೂ ಹಾಕಲು ಬಳಸುವ ಸೂಜಿ ಮರುಬಳಕೆ, ಕಟ್ಟಿಂಗ್‌ಶಾಪ್‌ನಲ್ಲಿ ಬ್ಲೇಡ್‌ಗಳ ಮರುಬಳಕೆ, ಅಸುರಕ್ಷಿತ ಲೈಂಗಿಕ ಕ್ರಿಯೆಯಿಂದಲೂ ಹೆಪಟೈಟಿಸ್ ಹರಡುವ ಸಾಧ್ಯತೆ ಹೆಚ್ಚು' ಎಂದು ವಿವರ ನೀಡುತ್ತಾರೆ ಬೆಂಗಳೂರಿನ ಫೋರ್ಟಿಸ್ ಆಸ್ಪತ್ರೆಯಲ್ಲಿ ಗ್ಯಾಸ್ಟ್ರೋಎಂಟರಾಲಜಿಸ್ಟ್ ಆಗಿರುವ ಡಾ. ರವೀಂದ್ರ ಬಿ.ಎಸ್.

'ಈ ಕಾಯಿಲೆ ಬರಲು ಯಾವುದೇ ವಯಸ್ಸಿನ ಮಿತಿ ಇಲ್ಲ. ಗರ್ಭದಲ್ಲಿರುವ ಮಗುವಿನಿಂದ ಹಿಡಿದು ಇಳಿ ವಯಸ್ಸಿನವರೆಗೆ ಎಲ್ಲರಿಗೂ ಈ ಕಾಯಿಲೆ ಬರಬಹುದು. ಹೀಗಾಗಿ ಎಲ್ಲ ವಯಸ್ಸಿನವರೂ ಈ ಕಾಯಿಲೆ ಬಗ್ಗೆ ಹೆಚ್ಚು ಜಾಗ್ರತೆ ವಹಿಸುವುದು ಅತ್ಯವಶ್ಯಕ. ಸಾಮಾನ್ಯವಾಗಿ ಆಯಾಸ, ಕೀಲು ನೋವು, ಸಣ್ಣಗೆ ಜ್ವರ, ತಲೆಸುತ್ತುವಿಕೆ, ವಾಂತಿ, ಹಸಿವಾಗದಿರುವಿಕೆ, ಗಾಢ ಹಳದಿ ಮೂತ್ರ ಮತ್ತು ಹೊಟ್ಟೆನೋವು ಕಾಣಿಸಿಕೊಳ್ಳುತ್ತದೆ. ಆದರೆ ಇದನ್ನು ಹೆಪಟೈಟಿಸ್ ಬಿ ಎಂದು ಊಹೆ ಮಾಡುವುದು ಕಷ್ಟ. ಕಾಯಿಲೆ ತೀವ್ರ ಸ್ವರೂಪಕ್ಕೆ ಬಂದ ಬಳಿಕವಷ್ಟೇ ಇದು ಹೆಪಟೈಟಿಸ್ ಬಿ ಎಂಬುದು ತಿಳಿಯುತ್ತದೆ. ಈ ಕಾರಣಕ್ಕೆ ಇದನ್ನು 'ಸೈಲೆಂಟ್ ಕಿಲ್ಲರ್' ಎಂದು ಕರೆಯಬಹುದು' ಎಂದು ಹೇಳುತ್ತಾರೆ ಅವರು.

'ಹೆಪಟೈಟಿಸ್ ಬಿ ಇದ್ದ ವ್ಯಕ್ತಿಯಲ್ಲಿ ಈ ಕಾಯಿಲೆ ತೀವ್ರವಾದಾಗ ಲಿವರ್ ಕ್ಯಾನ್ಸರ್, ಲಿವರ್ ಫೇಲ್ಯೂರ್, ಜಾಂಡೀಸ್, ಕಿಡ್ನಿ ಸಮಸ್ಯೆ, ಫೈಬ್ರೋಸಿಸ್, ಲಿವರ್ ಸಿರೋಸಿಸ್ ಮುಂತಾದ ಸಮಸ್ಯೆಗಳು ಉಂಟಾಗುವ ಸಾಧ್ಯತೆ ಇದೆ, ಕೆಲವರಲ್ಲಿ ಕಿಡ್ನಿ ಸರಿಯಾಗಿ ಕೆಲಸ ಮಾಡದೇ ಇರುವುದು, ಕಾಲು ಊತ ಇತರೆ ಲಕ್ಷಣಗಳು ಸಹ ಕಾಣಿಸಿಕೊಂಡರೆ ಇದು ಹೆಪಟೈಟಿಸ್ ಬಿಯಿಂದ ಎಂಬುದನ್ನು ಪತ್ತೆ ಹಚ್ಚಬಹುದು. ಹೀಗಾಗಿ ಹೊಟ್ಟೆಯಲ್ಲಿ ಯಾವುದೇ ಸಮಸ್ಯೆ ಕಂಡುಬಂದರೂ ವೈದ್ಯರ ಬಳಿ ತಪಾಸಣೆ ಮಾಡಿಸಿಕೊಳ್ಳುವುದು ಒಳ್ಳೆಯದು' ಎಂದು ಸಲಹೆ ಮಾಡುತ್ತಾರೆ ಡಾ. ರವೀಂದ್ರ.

## ಮುನ್ನೆಚ್ಚರಿಕೆಗಳೇನು?

ಹೆಪಟೈಟಿಸ್ ಬಿ ಬರದಂತೆ ತಡೆಯಲು ಇರುವ ಒಂದೇ ಮಾರ್ಗ ಎಂದರೆ ಸೂಕ್ತ ಸಮಯದಲ್ಲಿ ಲಸಿಕೆ ಹಾಕಿಸಿಕೊಳ್ಳುವುದು. ಹುಟ್ಟಿದ ಪ್ರತಿ ಮಗುವಿಗೂ ವಯಸ್ಸಿಗೆ ಅನುಗುಣವಾಗಿ ಇದರ ಲಸಿಕೆ ಪಡೆದುಕೊಂಡರೆ, ಭವಿಷ್ಯದಲ್ಲಿ ಈ ಕಾಯಿಲೆ ಬರುವುದನ್ನು ತಡೆಗಟ್ಟಬಹುದು, ಪ್ರಸ್ತುತ ಭಾರತದಲ್ಲಿ 100ರಲ್ಲಿ ಎರಡು ಪ್ರಕರಣಗಳು ನಗರ ಭಾಗದಲ್ಲಿ ಕಂಡುಬಂದರೆ, ಗ್ರಾಮೀಣ ಭಾಗದಲ್ಲಿ ಶೇ.3ರಿಂದ 4ರಷ್ಟು ಜನರಲ್ಲಿ ಈ ಕಾಯಿಲೆ ಕಾಣಿಸಿಕೊಳ್ಳುತ್ತಿದೆ.

## ಚಿಕಿತ್ಸೆಯೂ ಇದೆ...

ಹೆಪಟೈಟಿಸ್ ಬಿ ಗೆ ಸೂಕ್ತ ಚಿಕಿತ್ಸೆಯೂ ಇದೆ. ಸಾಮಾನ್ಯವಾಗಿ ಗರ್ಭಿಣಿಯರಿಗೆ ಗರ್ಭಧಾರಣೆ ಸಂದರ್ಭದಲ್ಲಿಯೇ ಹೆಪಟೈಟಿಸ್ ಬಿ ಪರೀಕ್ಷೆ ಮಾಡಿ ಇದು ಬರದಂತೆ ತಡೆಯಬಹುದು, ಈ ಮೂಲಕ ಮಗುವಿಗೂ ಬರುವ ಅಪಾಯವನ್ನು ತಪ್ಪಿಸಬಹುದು. ದೊಡ್ಡವರಲ್ಲಿ ಈ ಕಾಯಿಲೆ ಇದ್ದರೆ, ಎಚ್‌ಬಿಎಫ್‌ಎಜಿ ಪರೀಕ್ಷೆ, ಹೆಪಟೈಟಿಸ್ ಡಿಎನ್‌ಎ ಪರೀಕ್ಷೆ ಮೂಲಕ ಎಷ್ಟು ಪ್ರಮಾಣದಲ್ಲಿ ಇದು ಹರಡಿದೆ ಎಂಬುದನ್ನು ಪತ್ತೆ ಹಚ್ಚಬಹುದು, ಅಲ್ಟ್ರಾಸೌಂಡ್‌ನಿಂದಲೂ ಎಷ್ಟು ಪ್ರಮಾಣದಲ್ಲಿ ಲಿವರ್‌ಗೆ ಹಾನಿಯಾಗಿದೆ ಎಂಬುದನ್ನು ತಿಳಿಯಬಹುದು.

ಹೆಪಟೈಟಿಸ್ ಬಿ ಬರದಂತೆ ತಡೆಯುವ ಲಸಿಕೆ ಹಾಕಿಸಿಕೊಳ್ಳುವುದು ಕಡ್ಡಾಯ. ಕುಟುಂಬದಲ್ಲಿ ಈಗಾಗಲೇ ಹೆಪಟೈಟಿಸ್ ಬಿ ಇತಿಹಾಸ ಇರುವವರು ಇದ್ದರೆ, ಆ ಕುಟುಂಬದ ಎಲ್ಲಾ ಸದಸ್ಯರು ಒಮ್ಮೆ ಇದರ ಪರೀಕ್ಷೆ ಮಾಡಿಸಿಕೊಳ್ಳುವುದು ಸೂಕ್ತ. ಒಂದು ವೇಳೆ ನೆಗೆಟಿವ್ ಇದ್ದರೂ, ಲಸಿಕೆ ಹಾಕಿಸಿಕೊಳ್ಳಬಹುದು. ಲಸಿಕೆಯು ಎಲ್ಲಾ ವಯೋಮಾನದವರಿಗೂ ಲಭ್ಯವಿದೆ.

ಹೆಪಟೈಟಿಸ್ ಬಿ ಬಗ್ಗೆ ಕುಟುಂಬದ ಇತಿಹಾಸ ಇರುವವರು ಆರೋಗ್ಯದ ಬಗ್ಗೆ ಬಹಳ ಜಾಗರೂಕರಾಗಿರಬೇಕು. ಧೂಮಪಾನ, ಮದ್ಯಪಾನದಿಂದ ದೂರವಿರುವುದು ಒಳ್ಳೆಯದು. ಕರಿದ ತಿಂಡಿ, ಖಾರ ಪದಾರ್ಥ ವರ್ಜ್ಯ. ದೈಹಿಕ ವ್ಯಾಯಾಮ, ನಡಿಗೆ ಆರೋಗ್ಯ ಕಾಪಾಡಿಕೊಳ್ಳಲು ಸಹಕಾರಿ.